ತಾವು ಏನು ಆದೇಶ ಕೊಟ್ಟಿದ್ದಿರಿ ಅದರ ಮೇಲೆ ನಾವು ಕೊಟ್ಟುಬಿಟ್ಟೆವು. ಅವರು ಹಣ ಬಂದಿಲ್ಲವೆಂದು ನಮ್ಮಹತ್ತಿರ ಬರುತ್ತಾರೆ. ಆದ್ದರಿಂದ, ತಾವು ಯಾವುದನ್ನೇ ಅನುಷ್ಠಾನಕ್ಕೆ ತರಬೇಕಾದರೆ, ಅದಕ್ಕೊಂದು ಕಾಲಮಿತಿ ಇರಬೇಕು, ಜವಾಬ್ದಾರಿಯುತವಾಗಿ ಕಾರ್ಯನಿರ್ವಹಣೆ ಮಾಡಬೇಕೆಂದು ಆದೇಶ ಕೊಡಬೇಕು. ಈ ಸಮಸ್ಯೆ ಇನ್ನೊಂದು ಸಾರಿ ಈ ಸದನದಲ್ಲಿ ಬಾರದ ಹಾಗೆ ಮಾಡಬೇಕು. ದೇವಸ್ಥಾನವಾಗದಿದ್ದರೆ ಜನರು ನಮ್ಮನ್ನು ಬಿಡುವುದಿಲ್ಲ.

ಅಧ್ಯಕ್ಷರು : ಅವರು ಮಾಡುತ್ತಾರೆ ಬಿಡಿ. ಶ್ರೀಮಾನ್ ಪಿ.ಜಿ.ಆರ್. ಸಿಂಧ್ಯಾರವರೆ, ಬಿ.ಟಿ. ಲಲಿತಾನಾಯಕ್‌ರವರ ಪ್ರಶ್ನೆಗೆ ಉತ್ತರ ಕೊಡಿ.

ದೇವದುರ್ಗಕ್ಕೆ ಬಸ್ ಡಿಪೋ

166 - ಶ್ರೀಮತಿ ಬಿ.ಟಿ. ಲಲಿತಾ ನಾಯಕ್ (ದೇವದುರ್ಗ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನಲ್ಲಿ ಒಂದು ಬಸ್ ಡಿಪೋ ಬೇಕೆಂದು ಬೇಡಿಕೆ ಬಹುದಿನಗಳಿಂದ ಇದ್ದು ಸರ್ಕಾರ ಎಷ್ಟು ದಿನಗಳಲ್ಲಿ ಈ ಬೇಡಿಕೆಯನ್ನು ಈಡೇರಿಸುವುದು?

ಆ) ರಾಜ್ಯದ ಹೆಚ್ಚುಕಡಿಮೆ ಎಲ್ಲಾ ತಾಲ್ಲೂಕು ಬಸ್‌ನಿಲ್ದಾಣಗಳಲ್ಲಿ ಶೌಚಾಲಯವು ಅತ್ಯಂತ ಕೊಳಕಾಗಿದ್ದು ಅವುಗಳನ್ನು ಉಪಯೋಗ ಮಾಡಲು ಸಾಧ್ಯವೇ ಇರದಂತಹ ಪರಿಸ್ಥಿತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಶೌಚಾಲಯಗಳನ್ನು ಶುಚಿಯಾಗಿಡಲು ಹಾಗೂ ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು) :

ಅ) ದೇವದುರ್ಗದಲ್ಲಿ ಬಸ್ ಘಟಕವನ್ನು ಕೂಡಲೇ ಸ್ಥಾಪಿಸುವ ಅವಶ್ಯಕತೆಯು ಸದ್ಯಕ್ಕಿರುವುದಿಲ್ಲ.

ಆ) ರಾಜ್ಯದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಒಟ್ಟು 286 ಬಸ್ ನಿಲ್ದಾಣಗಳ ಪೈಕಿ 172ನ್ನು ತಾಲ್ಲೂಕು ಕೇಂದ್ರ ಹಾಗೂ ಜನ ದಟ್ಟಣೆಯ ಬಸ್ ನಿಲ್ದಾಣಗಳೆಂದು ಗುರುತಿಸಿ ಇವುಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಹಾಗೂ ಇವು ಉಪಯೋಗಿಸುವ ಮಟ್ಟದಲ್ಲಿವೆ.

ಇ) ಈ ಶೌಚಾಲಯಗಳನ್ನು ಶುಚಿಯಾಗಿಡಲು ಖಾಸಗಿ ವ್ಯಕ್ತಿಗಳನ್ನು 'ಪೇ ಅಂಡ್ ಯೂಸ್' ಪದ್ಧತಿಯನ್ವಯ ನೇಮಿಸಲಾಗಿದೆ. ಹಾಗೂ ಸುಲಭ ಇಂಟರ್‌ನ್ಯಾಷನಲ್‌ರವರಿಗೂ ವಹಿಸಲಾಗಿದೆ ಉಳಿದವನ್ನು ಸಂಸ್ಥೆಯು ನಿರ್ವಹಿಸುತ್ತದೆ. ಸಾರ್ವಜನಿಕರಿಗೆ ಇವುಗಳನ್ನು ಶುಚಿಯಾಗಿಡಲು ಬರಹಗಳ ಮೂಲಕ ಮನವಿ ಮಾಡಲಾಗಿದೆ.

ಶ್ರೀಮತಿ ಬಿ.ಟಿ.ಲಲಿತಾ ನಾಯಕ್ : ಮಾನ್ಯ ಅಧ್ಯಕ್ಷರೆ, ದೇವದುರ್ಗದಲ್ಲಿ ಬಸ್‌ಘಟಕವನ್ನು ಕೂಡಲೇ ಸ್ಥಾಪಿಸುವಂತಹ ಅವಶ್ಯಕತೆ ಸಧ್ಯಕ್ಕೆ ಇರುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಹಾಗಾದರೆ, ಅಂತಹ ಘಟಕವನ್ನು ಸ್ಥಾಪಿಸಬೇಕಾದರೆ ಯಾವ ಮಾನದಂಡವನ್ನು ತಾವು ಅನುಸರಿಸುತ್ತೀರಿ? ಯಾವಾಗ ಮಾಡುತ್ತೀರಿ? ಇದಕ್ಕೆ ಏನು ಅರ್ಹತೆ ಬೇಕು? ದಯವಿಟ್ಟು, ತಾವು ತಿಳಿಸಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಈ ಬಸ್ ಡಿಪೋಗಳನ್ನು ಪ್ರಾರಂಭ ಮಾಡತಕ್ಕ ಸಂದರ್ಭದಲ್ಲಿ, ಸಾರಿಗೆ ಸಂಸ್ಥೆಯ ಒಂದು ಆರ್ಥಿಕ ಪರಿಸ್ಥಿತಿ ಮತ್ತು ಪರ್ಟಿಕ್ಯುಲರ್ಲಿ ದೇವದುರ್ಗ, ರಾಯಚೂರು ಜಿಲ್ಲೆ ರಾಷ್ಟ್ರೀಕರಣವಾಗಿರುವುದರಿಂದಾಗಿ, ಅಲ್ಲಿ ಸಂಪೂರ್ಣವಾಗಿ ಪಬ್ಲಿಕ್ ಟ್ರಾನ್ಸ್‌ಪೋರ್ಟ್‌ನ ಜವಾಬ್ದಾರಿ ಸರ್ಕಾರದ ಮೇಲೆ ಸಾರಿಗೆ ಸಂಸ್ಥೆ ಮೇಲಿರುವುದರಿಂದಾಗಿ ಅದಕ್ಕೆ ಆದ್ಯತೆ ಕೊಟ್ಟು, ಈ ಮಾನದಂಡವನ್ನು ನಾವು ಉಪಯೋಗಿಸಿಕೊಂಡಿದ್ದೇವೆ. ಅದು ಸಧ್ಯಕ್ಕಾಗಿಲ್ಲವೆಂದು ಹೇಳಿದ್ದರೂ ಸಹ, ಈ ವರ್ಷದಲ್ಲಿ ನಾನು ಜಾಗವನ್ನು ತೆಗೆದುಕೊಂಡು, ಮಂಜೂರಾತಿ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆಂಬ ಭರವಸೆ ಕೊಡುತ್ತೇನೆ.

ಶ್ರೀಮತಿ ಬಿ. ಟಿ. ಲಲಿತಾನಾಯಕ್ : ಮಾನ್ಯ ಅಧ್ಯಕ್ಷರೆ, ಒಪ್ಪಿಗೆ ಕೊಟ್ಟು ಬಿಟ್ಟು , ಸಧ್ಯಕ್ಕೆ ಇಲ್ಲ ಎಂದಿದ್ದರಿಂದ ನನಗೆ ಗಾಬರಿಯಾಗಿತ್ತು. ತಾವು ಮಾಡುತ್ತೇವೆಂದು ಒಪ್ಪಿಕೊಳ್ಳಬೇಕು ಮತ್ತು ಮಾಡಬೇಕು. ಆಮೇಲೆ, ಈ ದೇವದುರ್ಗ ಒಂದೇ ಅಲ್ಲ, ಬೇರೆ ಬೇರೆ ತಾಲ್ಲೂಕಿನ ಬಸ್‌ನಿಲ್ದಾಣಗಳು ಬಹಳಷ್ಟು ಗಲೀಜಾಗಿವೆ. ಪುರುಷರು ಮತ್ತು ಮಹಿಳೆಯರಿಗೆ ಬೇರೆ ಬೇರೆ ಶೌಚಾಲಯ ಮಾಡಿದ್ದರೂ ಸಹ, ಪುರುಷರು ಯಾರೂ ಅಲ್ಲಿಗೆ ಹೋಗುವುದಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ಇಲ್ಲವೇ? ಮಹಿಳೆಯರಿಗಾಗಿ ಇರುವಂಥ ಮುಂದುಗಡೆ ಇವರು ಸಾಲಾಗಿ ನಿಂತಿರುವುದನ್ನು ಕಂಡು ಮಹಿಳೆಯರು ಮುಜುಗರಪಟ್ಟುಕೊಂಡು ಬಸ್ಸಿನಿಂದ ಕೆಳಗೆ ಇಳಿಯಲಾರದಂಥ ಪರಿಸ್ಥಿತಿಯಿದೆ. ಇದಕ್ಕೆ ನೀವು ಯಾವ ರೀತಿಯಿಂದ ಪುರುಷರಿಗೆ ತಿಳುವಳಿಕೆ ಕೊಡುತ್ತೀರಿ? ಮತ್ತೆ ಗಲೀಜಾಗಿರುವಂಥಾದ್ದಕ್ಕೆ ಯಾವ ರೀತಿ ಸ್ವಚ್ಛಗೊಳಿಸುವಂತಹ ಒಂದು ಮಾರ್ಗದರ್ಶನ ಅಥವಾ ತಿಳುವಳಿಕೆಯನ್ನು ಜನರಿಗೆ ಹೇಗೆ ಒದಗಿಸುತ್ತೀರಿ?

ಅಧ್ಯಕ್ಷರು : ಇದನ್ನು ಆರೋಗ್ಯ ಮಂತ್ರಿಗಳು ಮಾಡಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಈ ದೇವದುರ್ಗದಲ್ಲಿ ಕಟ್ಟತಕ್ಕ ಬಸ್ ಡಿಪೋ ಬಗ್ಗೆ ಈ ವರ್ಷ ನಾವು ಜಾಗವನ್ನು ಸಾರಿಗೆ ಸಂಸ್ಥೆಯ ವಶಕ್ಕೆ ತೆಗೆದುಕೊಂಡು, ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಒಂದು ಮಿನಿ ಡಿಪೋವನ್ನು ಮಾಡಲಿಕ್ಕೆ ಅಲ್ಲಿರತಕ್ಕ ಸಾರಿಗೆಯನ್ನು ಉತ್ತಮಪಡಿಸಲಿಕ್ಕೆ ಒಂದು ಪ್ರಾಮಾಣಿಕವಾದಂಥ ಪ್ರಯತ್ನವನ್ನು ನಾನು ಮಾಡುತ್ತೇನೆ. ಮತ್ತೆ, ತಾಲ್ಲೂತಿನ ಮತ್ತು ಜಿಲ್ಲೆಗಳಲ್ಲಿರತಕ್ಕ ಬಸ್‌ನಿಲ್ದಾಣಗಳಲ್ಲಿ ಶೌಚಾಲಯಗಳೇನಿವೆ ಅವುಗಳಲ್ಲಿ ಸ್ತ್ರೀಯರಿಗೆ ಮತ್ತು ಪುರುಷರಿಗೆ ಪ್ರತ್ಯೇಕವಾಗಿ ನಾವು ಕಟ್ಟಿಸಿದ್ದರೂ ಸಹಿತ ಅದಲು ಬದಲಾಗಿ ಹೋಗುತ್ತಾರೆಂಬ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದಾರೆ. ನಮಗೂ ಸಹಿತ ಇವತ್ತು ಈ ಶೌಚಾಲಯಗಳಿರತಕ್ಕ ಪರಿಸ್ಥಿತಿ ಬಗ್ಗೆ ಸಮಾಧಾನವಿಲ್ಲ. ಆದರಿಂದಾಗಿಯೇ, ಇದನ್ನು ಖಾಸಗಿಯವರಿಗೆ ಕೊಟ್ಟು, ಈ ಸುಲಭ ಶೌಚಾಲಯದಂಥ ಸಂಸ್ಥೆಗಳಿಗೆ ಕೊಟ್ಟು ಅವರ ಮೂಲಕವೇ ನಡೆಸತಕ್ಕಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು

ಆದಷ್ಟು ಅವುಗಳನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅದರ ಜೊತೆಗೆ, ಸಾರಿಗೆ ಸಂಸ್ಥೆಯ ಆಡಳಿತದಿಂದಲೂ ಪರಿಸ್ಥಿತಿಯನ್ನು ಸುಧಾರಣೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಬೀಳಗಿ ತಾಲ್ಲೂಕಿಗೆ ಬಸ್ ಡಿಪೋ

173 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಕಳೆದ ಎರಡು ವರ್ಷಗಳಿಂದ ಬೀಳಗಿ ತಾಲ್ಲೂಕಿಗೆ ಕೆ.ಎಸ್.ಆರ್.ಟಿ.ಸಿ.ಡಿಪೋ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದ್ದೆಯೇ ?*

ಆ) *ಈಗಾಗಲೇ ಡಿಪೋಕ್ಕೆ ಬೇಕಾದ ಭೂಮಿಯನ್ನು ಖರೀದಿಸಿ ಕೊಟ್ಟಿದ್ದರೂ ವಿಳಂಬಕ್ಕೆ ಕಾರಣವೇನು ?*

ಇ) *ಜರೂರಾಗಿ ಡಿಪೋ ಪ್ರಾರಂಭಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ?*

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು) :

ಅ) ಹೌದು

ಆ) ಸಂಸ್ಥೆಯ ವಶದಲ್ಲಿ ಯಾವ ನಿವೇಶನವೂ ಇರುವುದಿಲ್ಲ.

ಇ) ಅವಶ್ಯಕತೆ ಮತ್ತು ಸೂಕ್ತ ನಿವೇಶನ ಹಾಗೂ ಸಂಪನ್ಮೂಲಗಳ ಲಭ್ಯತೆಗಳನ್ನವಲಂಬಿಸಿ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಜೆ.ಬಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಬೀಳಗಿಯವರು ಹಾಗೂ ಕಾರ್ಪೋರೇಷನ್ ಅಧಿಕಾರಿಗಳ ನಿರ್ದೇಶನದ ಮೇರೆಗೆ ಈಗಾಗಲೇ ತಾಲ್ಲೂಕಿನ ಜನರು ನಾವು ಸ್ವಂತ ದುಡ್ಡು ಹಾಕಿ ನಿವೇಶನಗಳನ್ನು ಖರೀದಿ ಮಾಡಿ ಬೀಳಗಿ ತಾಲ್ಲೂಕಿಗೆ ಡಿಪೋ ಆಗಬೇಕು ಎಂದು ಕೇಳುತ್ತಾ ಬರುತ್ತಿದ್ದೇವೆ. ಸನ್ಮಾನ್ಯ ಸಿಂಧ್ಯಾ ಸಾಹೇಬರ ನೋಟೀಸಿಗೂ ತಂದಿದ್ದೇವೆ. ಬೀಳಗಿ ಡಿಪೋ ಆಗಬೇಕೆನ್ನುವ ಅಭಿಪ್ರಾಯವನ್ನು ಅವರೂ ವ್ಯಕ್ತ ಮಾಡಿದ್ದಾರೆ. ಅದಕೋಸ್ಕರವಾಗಿ ದಯಮಾಡಿ 1997-98ನೇ ಸಾಲಿನಲ್ಲಿ ಬೀಳಗಿಗೆ ಕೆ.ಎಸ್.ಆರ್.ಟಿ.ಸಿ. ಬಸ್ ಡಿಪೋವನ್ನು ಪ್ರಾರಂಭಿಸುವ ಕಾರ್ಯಕ್ರಮ ಕೈಗೊಳ್ಳುತ್ತೀರೋ ಎಂದು ನಾನು ಕೇಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಇದು ಸಂಪೂರ್ಣವಾಗಿ ರಾಷ್ಟ್ರೀಕರಣವಾಗಿರತಕ್ಕ ಪ್ರದೇಶವಾಗಿರುವುದರಿಂದ ಈ ವರ್ಷದಲ್ಲೇ ನಿಮ್ಮ ಕ್ಷೇತ್ರದಲ್ಲಿ, ನಿಮ್ಮ ತಾಲ್ಲೂಕಿನಲ್ಲಿ ಈ ಒಂದು ಡಿಪೋವನ್ನು ಪ್ರಾರಂಭ ಮಾಡಲಿಕ್ಕೆ ಸ್ಥಳ ತೆಗೆದುಕೊಳ್ಳಲಿಕ್ಕೆ, ಕೆಲಸ ಮಾಡಲಿಕ್ಕೆ ನಾನು ಪ್ರಾರಂಭ ಮಾಡುತ್ತೇನೆ. ಈಗಾಗಲೇ ಸದನದಲ್ಲಿ ಬೆಲೆ ಏರಿಕೆ ಬಗ್ಗೆ ಚರ್ಚೆಯಾದಂಥ ಸಂದರ್ಭದಲ್ಲಿ ರಾಷ್ಟ್ರೀಕರಣವಾಗಿರತಕ್ಕ 9 ಜಿಲ್ಲೆಗಳ ಎಲ್ಲಾ ತಾಲ್ಲೂಕು